ಚಂದ್ರಧರ ಶರ್ಮಾ ಅವರ ಪೂರ್ವಜರು ಕಾಂಗಡಾದ 'ಗುಲೇರ' ಎಂಬ ಊರಿನವರಾಗಿದ್ದರಿಂದ 'ಗುಲೇರಿ' ಎಂದೇ ಅವರು ಪ್ರಸಿದ್ಧರು. ರಾಜಸ್ಥಾನದ ಜಯಪುರ ಅವರ ಊರು. ಆಧುನಿಕ ಹಿಂದಿ ಕಥೆ, ನಿಬಂಧ, ವಿಮರ್ಶೆ ಮತ್ತು ಭಾಷಾಶಾಸ್ತ್ರದ ವಿಕಾಸಕ್ಕೆ ಚಂದ್ರಧರ ಶರ್ಮಾ ಗುಲೇರಿಯವರ ಕೊಡುಗೆ ಮಹತ್ವಪೂರ್ಣವಾದದ್ದು. ಇವರು ಸಂಸ್ಕೃತ ಮತ್ತು ಅಂಗ್ಲ ಭಾಷೆಯನ್ನು ಚೆನ್ನಾಗಿ ಬಲ್ಲವರಾಗಿದ್ದರು. ಅಜಮೇರದ ಮೆಯೊ ಮಹಾವಿದ್ಯಾಲಯದಲ್ಲಿ ಅಧ್ಯಾಪಕರಾಗಿ, ಕಾಶಿ ಹಿಂದೂ ವಿಶ್ವವಿದ್ಯಾಲಯದ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಪ್ರಾಚಾರ್ಯರಾಗಿ ಕೆಲಸ ಮಾಡಿದವರು.

ತಿರುಗಿ ಬರಲಿಲ್ಲವಾದರೆ, ನನಗೆ ದರಬಾರ ಸಾಹೇಬರ ಹೊಸ್ತಿಲಿಗೆ ಹಣೆಹಚ್ಚುವ ಸೌಭಾಗ್ಯ ಸಿಗದಿರಲಿ. ಬದ್ಮಾಶರು, ಕುದುರೆ-ಬಂದೂಕು ನೋಡುತ್ತಲೆ ಜೊಲ್ಲು ಸುರಿಸತೊಡಗುತ್ತಾರೆ ಮತ್ತು ಕಾಲು ಹಿಡಿಯತೊಡಗುತ್ತಾರೆ. ಹೀಗೆಯೆ ಕತ್ತಲಲ್ಲಿ ಮೂವತ್ತು ಮಣದ ಗುಂಡು ಎಸೆಯುತ್ತಾರೆ. ಆ ದಿನ ದಾಳಿ ಮಾಡಿದ್ದೆವು-ನಾಲ್ಕು ಮೈಲುಗಳವರೆಗೆ ಒಬ್ಬ ಜರ್ಮನ್ ಸೈನಿಕನನ್ನು ಬಿಟ್ಟಿರಲಿಲ್ಲ. ಜನರಲ್ ಸಾಹೇಬರು ಹಿಂದೆ ಸರಿಯುವ ಆದೇಶ ಕೊಟ್ಟರು, ಇಲ್ಲದಿದ್ದರೆ...'

'ಇಲ್ಲದಿದ್ದರೆ ಸೀದಾ ಬರ್ಲಿನ್ ಮುಟ್ಟುತ್ತಿದ್ದೆವು. ಅಲ್ಲವೇ?' ಸುಬೇದಾರ ಹಜಾರಸಿಂಹ ನಕ್ಕು ಹೇಳಿದ- 'ಯುದ್ಧದ ವಿಷಯದಲ್ಲಿ ಜಮಾದಾರ ಅಥವಾ ನಾಯಕ ಹೇಳಿದಂತೆ ನಡೆಯುವುದಿಲ್ಲ. ದೊಡ್ಡ ಆಫೀಸರ ಯೋಚಿಸುತ್ತಾರೆ. ಮೂರು ನೂರು ಮೈಲುಗಳವರೆಗಿನ ಸವಾಲಿದೆ. ಎದುರಿಸಬೇಕು. ಒಂದು ದಿಕ್ಕಿನಲ್ಲಿ ಮುಂದೆ ಹೋದರೆ ಏನಾಗುವದು?'

'ಸುಬೇದಾರರೆ ನಿಜ.' ಲಹನಾಸಿಂಹ ಹೇಳಿದ-'ಆದರೆ ಏನು ಮಾಡುವುದು? ಮೂಳೆಗಳಲ್ಲಿ ಚಳಿ ಸೇರಿಬಿಟ್ಟಿದೆ. ಸೂರ್ಯ ಉದಯಿಸುತ್ತಿಲ್ಲ ಮತ್ತೆ ಕಣಿವೆಯಲ್ಲಿ ಎರಡೂ ಕಡೆಯಿಂದ ಚಂಬಾ ಕಣಿವೆಯಲ್ಲಿಯಂತೆ ಜಲಧಾರೆಗಳು ಹರಿಯುತ್ತಿವೆ. ಒಂದು ದಾಳಿಯಾದರೆ ಬೆಚ್ಚಗಾಗುವುದು.'

'ಉದಮಿ ಏಳು. ಅಗ್ಗಿಷ್ಟಿಕೆಯಲ್ಲಿ ಇದ್ದಿಲು ಹಾಕು. ವಜೀರಾ, ನೀವು ನಾಲ್ಕು ಜನರು ಬಾಲ್ಟಿಗಳನ್ನು ತೆಗೆದುಕೊಂಡು ಕಣಿವೆಯ ನೀರನ್ನು ಹೊರಗೆ ಹಾಕಿ. ಮಹಾಸಿಂಹ, ಸಾಯಂಕಾಲವಾಗಿದೆ. ಕಣಿವೆಯ ದ್ವಾರದ ಕಾವಲುಗಾರರನ್ನು ಬದಲಿಸು.' ಹೀಗೆ ಹೇಳುತ್ತ ಸುಬೇದಾರ ಪೂರ್ತಿ ಕಣಿವೆಯ ಚಕ್ಕರ ಹೊಡೆಯತೊಡಗಿದರು.

ವಜೀರಸಿಂಹ ಸೇನಾದ ವಿದೂಷಕನಾಗಿದ್ದ. ಬಾಲ್ಟಿಯಲ್ಲಿ ಹೊಲಸು ನೀರನ್ನು ತುಂಬಿ ಕಣಿವೆಯ ಹೊರಗೆ ಚೆಲ್ಲುತ್ತ ಹೇಳಿದ, 'ನಾನು ಆಚಾರ್ಯನಾಗಿ ಬಿಟ್ಟಿದ್ದೇನೆ. ಮಾಡು ಜರ್ಮನಿಯ ಬಾದಶಾಹನ ತರ್ಪಣ.' ಇದನ್ನು ಕೇಳಿ ಎಲ್ಲರೂ ನಕ್ಕರು ಮತ್ತು ಹತಾಶೆಯ ಮೋಡಗಳು ದೂರಾದವು. ಲಹನಾಸಿಂಹ ಎರಡನೆ ಬಾಲ್ಟಿ ತುಂಬಿ ಕೈಗೆ ಕೊಟ್ಟು ಹೇಳಿದ, 'ನಿಮ್ಮ ತೋಟದ ಖರಬೂಜಿನ ಗಿಡಗಳಿಗೆ ನೀರೂಣಿಸು. ಇಂಥ ಗೊಬ್ಬರವುಳ್ಳ ನೀರು ಪಂಜಾಬಿನಲ್ಲಿ ಎಲ್ಲಿಯೂ ಸಿಗುವುದಿಲ್ಲ.'

'ಹೌದು, ದೇಶವಲ್ಲ, ಇದು ಸ್ವರ್ಗ. ನಾನಂತೂ ಯುದ್ಧದ ನಂತರ ಇಲ್ಲಿ ಸರಕಾರಕ್ಕೆ ಹತ್ತು ಪಟ್ಟು ಜಮೀನು ಬೇಡುವೆ ಮತ್ತು ಹಣ್ಣುಗಳ ಗಿಡಗಳನ್ನು ನೆಡುವೆ.'

'ಶ್ರೀಮತಿಯವರಿಗೂ ಇಲ್ಲಿಗೆ ಕರೆಸಿಕೊಳ್ಳುವೆಯಾ? ಅಥವಾ ಅದೇ ಹಾಲು ಕುಡಿಸುವ ಫಿರಂಗಿ ಮೇಮ...'

'ಸುಮ್ಮನಿರು. ಇಲ್ಲಿಯವರಿಗೆ ನಾಚಿಕೆ ಇಲ್ಲ.'

'ದೇಶ ದೇಶದ ಆಚಾರ-ವಿಚಾರ. ಸಿಖ್ಖರು ತಂಬಾಕು ತಿನ್ನುವುದಿಲ್ಲ ಎನ್ನುವುದನ್ನು ಇಂದಿನವರೆಗೆ ನಾನು ಅವಳಿಗೆ ತಿಳಿಸುವುದು ಸಾಧ್ಯವಾಗಲಿಲ್ಲ. ಅವಳು ಸಿಗರೇಟ್ ಕೊಡಲು ಹಠ ಮಾಡುತ್ತಾಳೆ, ತುಟಿಗೆ ಹಚ್ಚಲು ಇಚ್ಛಿಸುತ್ತಾಳೆ, ಮತ್ತೆ ನಾನು ಹಿಂದೆ ಸರಿಯುತ್ತೇನೆ. ಆಗ ರಾಜಾ ಬೇಸರಿಸಿಕೊಂಡ, ಇನ್ನು ನನ್ನ ದೇಶಕ್ಕಾಗಿ ಹೋರಾಡುವುದಿಲ್ಲ ಎಂದು ತಿಳಿಯುತ್ತಾಳೆ.'

'ಸರಿ, ಈಗ ಬೋಧಾಸಿಂಹ ಹೇಗಿದ್ದಾನೆ?'

'ಚೆನ್ನಾಗಿದ್ದಾನೆ.'

'ರಾತ್ರಿ ಪೂರ್ತಿ ನೀನು ನಿನ್ನ ಎರಡೂ ಕಂಬಳಿಗಳನ್ನು ಅವನಿಗೆ ಹೊದಿಸುತ್ತೀಯಾ ಮತ್ತು ನೀನು ಅಗ್ಗಿಷ್ಟಿಕೆಯ ಸಹಾಯದಿಂದ ರಾತ್ರಿ ಕಳೆಯುತ್ತೀಯಾ, ನನಗೆ ಗೊತ್ತೇ